ಅ. ದಾ. ಸಂ. **269/2010**
ಡಿ. ಡಬ್ಲ್ಯೂ - **01**

ದಿನಾಂಕ: **05-11-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ವಾದಿಯ ಪರ ಶ್ರೀ.ವಿ.ಎಲ್ ಎನ್, ವಕೀಲರಿಂದ:-**

**14.** ನಿಮ್ಮ ತಾಯಿಯವರು ಮೃತಪಡುವ ಮೊದಲು ಅವರು ಅನಾರೋಗ್ಯದಿಂದ ಬಳಲುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನುನತ್ತಾರೆ. ನನ್ನ ತಾಯಿಗೆ ಗರ್ಭ ಕೋಶದ ಕ್ಯಾನ್ಸರ್ ಇತ್ತು. ಸದರಿ ಖಾಯಿಲೆಗೆ ನಿಮ್ಮ ತಾಯಿಯವರು ಬೆಂಗಳೂರಿನ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಳ್ಳುತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಸದರಿ ಆಸ್ಪತ್ರೆಯ ಎಲ್ಲಾ ವೆಚ್ಚಾವನ್ನು ವಾದಿಯೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ಕಿಮ್ಸ್ ಆಸ್ಪತ್ರೆಗೆ ಸಂಬಂಧಿಸಿದ ಎಲ್ಲಾ ವೆಚ್ಚಾ ವನ್ನು ನಾನೇ ನೋಡಿಕೊಳ್ಳುತ್ತಿದ್ದೇನು. ಅದಕ್ಕೆ ಸಂಬಂಧಿಸಿದಂತೆ ನಾನು ಮುಂದಿನ ದಿನಗಳಲ್ಲಿ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ಈಗ ಸಾಕ್ಷಿಗೆ ವೈದ್ಯಕೀಯ ವೆಚ್ಚಗಳ ಮರುಪಾವತಿ ಕೋರಿಕೆಯ ಅರ್ಜಿಯ ದೃಢೀಕಏತ ನಕಲನ್ನು ತೋರಿಸಿದ್ದು, ಅದರಂತೆ ವಾದಿಯು ನಿಮ್ಮ ತಾಯಿಯವರಿಗೆ ವೈದ್ಯಕೀಯ ವೆಚ್ಚವನ್ನು ನೋಡಿಕೊಳ್ಳುವ ಸಲುವಾಗಿ ಪಡೆದುಕೊಂಡಿರುವ ಲೋನ್ ಆಗಿದೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ವಾದಿಯು ನಿಮ್ಮ ತಾಯಿಯ ಎಲ್ಲಾ ವೈದ್ಯಕೀಯ ಖರ್ಚುಗಳನ್ನು ನೋಡಿಕೊಂಡಿರುತ್ತಾರೆ ಮತ್ತು ಸದರಿ ಖರ್ಚನ್ನು ಭರಿಸಲು ನಿಮ್ಮ ಬಳಿ ಸಾಕಷ್ಟು ಆದಾಯ ಇರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತಾರೆ.

ಕಿಮ್ಸ್ ಆಸ್ಪತ್ರೆಯು ಬೆಂಗಳೂರಿನಲ್ಲಿ ಇದೆ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ವಾದಿಯು ಬೆಂಗಳೂರಿನಲ್ಲಿ ವಾಸಿಸುತ್ತಿದ್ದ ಕಾರಣ ನಿಮ್ಮ ತಾಯಿಯವರು ಅವರ ಮನೆಯಲ್ಲಿಯೇ ಇದ್ದರು ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನಿಮ್ಮ ತಾಯಿಯು ಮೃತಪಟ್ಟಾಗ ವಾದಿಯೇ ಎಲ್ಲಾ ಖರ್ಚನ್ನು ನೋಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಈ ಹಂತದಲ್ಲಿ ಮುಂದುವರೆದ** ಪಾಟೀ **ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**2ನೇ ಅ. ಸಿ. ಜ. ಮತ್ತು ಜೆ.ಎಂ.ಎಫ್.ಸಿ,**
**ಮಾಗಡಿ**